ಕರ್ನಾಟಕ ಸರ್ಕಾರ
# ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್
ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು – 560 001
ಫೋನ್ : 080 2234 1391 (ಕಛೇರಿ) , 080 2234 1393 (ಫ್ಯಾಕ್ಸ್) , 080 2234 1395 (ಕಾರ್ಯನಿರ್ವಾಹಕ ನಿರ್ದೇಶಕರು) , 080 22879617 (ಆಡಳಿತ ಅಧಿಕಾರಿ)
ಇ-ಮೇಲ್ : ksche.bangalore@gmail.com, edkshec@yahoo.com ವೆಬ್‌ಸೈಟ್ : www.kshec.ac.in

ಸಂ.ಕರಾಉಶಿಪ/ಕನ್ನಡ ಕಡ್ಡಾಯ/143/2014-15 | 110 ದಿನಾಂಕ:04.06.2016

ಗೆ,
ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ
ಬೆಂಗಳೂರು-01

ಮಾನ್ಯರೇ,

ವಿಷಯ: ವೃತ್ತಿ ಶಿಕ್ಷಣದಲ್ಲಿ (ಇಂಜಿನಿಯರಿಂಗ್, ಮೆಡಿಕಲ್, ಕಾನೂನು ಹಾಗೂ ಕೃಷಿ ಇತ್ಯಾದಿ ವಿಭಾಗಗಳಲ್ಲಿ) ಕಡ್ಡಾಯವಾಗಿ ಕನ್ನಡವನ್ನು ಬೋಧಿಸುವ ಬಗ್ಗೆ.

ಉಲ್ಲೇಖ:1) ದಿನಾಂಕ:13.05.2015 ರಂದು ನಡೆದ ಪರಿಷತ್ತಿನ 14ನೇ ಸಾಮಾನ್ಯ ಸಭೆಯ ನಿರ್ಣಯ.
2) ದಿನಾಂಕ:05.05.2016 ರಂದು ನಡೆದ ಪರಿಷತ್ತಿನ 16ನೇ ಸಾಮಾನ್ಯ ಸಭೆಯ ನಿರ್ಣಯ.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಕಡ್ಡಾಯವಾಗಿ ಬೋಧಿಸುವ ವಿಷಯವನ್ನು ದಿನಾಂಕ: 13.05.2015 ರಂದು ನಡೆದ ಪರಿಷತ್ತಿನ 14ನೇ ಸಾಮಾನ್ಯ ಸಭೆಯಲ್ಲಿ ವಿಷಯಸೂಚಿಯಾಗಿ ಮಂಡಿಸಲಾಗಿದ್ದು, ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಪರಿಷತ್ತಿನ ನಿರ್ಣಯ ಈ ಕೆಳಕಂಡಂತೆ ಇದೆ.

**ವೃತ್ತಿ ಶಿಕ್ಷಣದಲ್ಲಿ (ಇಂಜಿನಿಯರಿಂಗ್, ಮೆಡಿಕಲ್, ಕಾನೂನು ಹಾಗೂ ಕೃಷಿ ವಿಭಾಗಗಳಲ್ಲಿ) ಕಡ್ಡಾಯವಾಗಿ ಕನ್ನಡವನ್ನು ಬೋಧಿಸುವ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇರುವುದರಿಂದ ಹಂಪಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಹೆಚ್.ಸಿ.ಬೋರಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಸಮಿತಿಯ ವರದಿ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಬಹುದೆಂದು ನಿರ್ಣಯಿಸಲಾಯಿತು.**

ಅದರಂತೆ, ಪ್ರೊ.ಹೆಚ್.ಸಿ.ಬೋರಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಸದರಿ ಸಮಿತಿ ದಿನಾಂಕ:16.01.2016 ರಂದು ವರದಿ ನೀಡಿದೆ. ಸದರಿ ವರದಿಯನ್ನು ದಿನಾಂಕ:05.05.2016 ರಂದು ನಡೆದ ಪರಿಷತ್ತಿನ 16ನೇ ಸಾಮಾನ್ಯ ಸಭೆಯಲ್ಲಿ ನಿರ್ಣಯಕ್ಕಾಗಿ ಮಂಡಿಸಲಾಗಿದ್ದು, ಸಾಮಾನ್ಯ ಸಭೆಯ ನಿರ್ಣಯ ಈ ಕೆಳಕಂಡಂತೆ ಇದೆ.

**ಪ್ರೊ.ಹೆಚ್.ಸಿ.ಬೋರಲಿಂಗಯ್ಯ ಇವರ ಅಧ್ಯಕ್ಷತೆಯ ಸಮಿತಿ ನೀಡಿರುವ ವರದಿಯಲ್ಲಿನ ಶಿಫಾರಸ್ಸುಗಳ ಬಗ್ಗೆ ಸಂಬಂಧಿತ ವಿಶ್ವವಿದ್ಯಾಲಯಗಳು ಈ ವಿಷಯವನ್ನು ಅಕಾಡೆಮಿಕ್ ಕೌನ್ಸಿಲ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು.**

ಮೇಲ್ಕಂಡ ಮಾಹಿತಿಯನ್ನು ಅವಗಾಹನೆ ಹಾಗೂ ಮುಂದಿನ ಕ್ರಮಕ್ಕಾಗಿ ಈ ಪತ್ರದ ಮೂಲಕ ತಿಳಿಸಲಾಗಿದೆ.

ಮುಂದುವರೆದು ಸದರಿ ಸಮಿತಿಯ ಶಿಫಾರಸ್ಸುಗಳು ಈ ಕೆಳಕಂಡ ವಿಶ್ವವಿದ್ಯಾಲಯ/ಕಾಲೇಜುಗಳಿಗೂ ಸಹ ಅನ್ವಯವಾಗುವುದರಿಂದ ಈ ಬಗ್ಗೆಯು ಸಹ ಅಗತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಕೋರಲಾಗಿದೆ.

1. ರಾಜೀವ್ ಗಾಂಧಿ ಆರೋಗ್ಯ,ವಿಶ್ವವಿದ್ಯಾಲಯ
2. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
3. ಕೃಷಿ ವಿಶ್ವವಿದ್ಯಾಲಯ
4. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ
5. ಪಶು, ಪಶುವೈದ್ಯಕೀಯ ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
6. ತೋಟಗಾರಿಕೆ ವಿಶ್ವವಿದ್ಯಾಲಯ

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
4.6.16
(ಡಾ.ಎಸ್.ಎ.ಕೋರಿ)
ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿ:
1. ಉಪಾಧ್ಯಕ್ಷರ ಆಪ್ತಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು, ಮಾಹಿತಿಗಾಗಿ.
2. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ.263, ವಿಧಾನಸೌಧ, ಬೆಂಗಳೂರು-01, ಮಾಹಿತಿಗಾಗಿ.